ಬಳಗ, ಮಿತ್ರ ಮಂಡಳಿ, ಯುವಕ-ಯುವತಿಯರು ಒಟ್ಟಾಗಿ ಹರಟೆ ಹೊಡೆಯುತ್ತ ವಿಹರಿಸುವಲ್ಲಿ ಅವರಿಗೆ ಇತ್ತ ನುಸುಳಲು ಇಷ್ಟವೂ ಇದ್ದಂತೆ ಕಾಣಿಸಲಿಲ್ಲ.

ವಸ್ತು ಸಂಗ್ರಹಾಲಯದ ಆ ಸುರಂಗದಲ್ಲಿ ಶ್ರೀಧರ್ ಮತ್ತು ನಾನು ಒಂದೆರಡು ಹೆಜ್ಜೆಯಿಡುತ್ತಿದ್ದಂತೆ ನಾಡಿ ಮಿಡಿತ ಏರುವಂತಾಯಿತು. ಇಷ್ಟರ ಮೇಲೆ ಒಳ ಸರಿಯುತ್ತ, ಸರಿಯುತ್ತ ಹೊರಗಿನ ಸದ್ದುಗದ್ದಲವೆಲ್ಲ ಕರಗಿ ಸುತ್ತ ಯಾರೂ ಇಲ್ಲವೇನೋ ನಾವು ಮಾತ್ರವೇ ಎಂಬ ಭಯ ಆರಂಭವಾಯಿತು. ನಮ್ಮನ್ನೇ ಅವುಕಿ ಹಿಡಿಯುವಂತಿದ್ದ ಆ ಗೋಡೆಗಳೆಡೆಯಲ್ಲಿ ನಿಧಾನ ಸಾಗುವಲ್ಲಿ ತುಂಬಿದ ಕತ್ತಲೆಯ ಅತ್ತತ್ತ ನಕ್ಷತ್ರದ ಬೆಳಕೊಂದು ಕಂಡಂತೆ ಭಾಸವಾಯಿತು. ಅದು ಕೃತಕ ವಿದ್ಯುತ್ ಕಿರಣವಿರಬೇಕೆನಿಸಿತು.

ನನಗೆ ಆ ಸುರಂಗದಿಂದ ಹೊರಗಾದ ಮೇಲೆ, ಆಶ್ಚರ್ಯವೆಂದರೆ ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಬಗೆಯ ಗುಹಾ ಮಂದಿರಗಳಲ್ಲಿ ಕುಳಿತು ಜ್ಞಾನಸಾಧನೆಗೈದ ಮತ್ತು ದೇಹವನ್ನು ಅಲ್ಲಲ್ಲಿಯೇ ಮುಡುಪಿದ ಅನೇಕ ಸಾಧಕರ ಶೂನ್ಯ ಸ್ಥಳಗಳು ನೆನಪಿಗೆ ಬಂದವು. ಅದರಲ್ಲಿ ಮೊದಲು ಮನಕ್ಕೆ ಬಂದದ್ದು ಆಂಧ್ರದ ತೆಲಂಗಾಣದ ಕೃಷ್ಣಾ ನದಿ ದಂಡೆಯ ಜನವಿಹೀನ ಗುಡ್ಡಬೆಟ್ಟಗಳ ನಡುವೆ ಕಂಡ ಅಕ್ಕ ಮಹಾದೇವಿಯ ಗುಹೆ !

* * *

ಉಡುತಡಿಯಲ್ಲೇ ಇದ್ದ ಮಲ್ಲಿಕಾರ್ಜುನನ ಗುಡಿ ಮತ್ತು ಅಲ್ಲಿದ್ದ ಗುರು ಮಲ್ಲಿಕಾರ್ಜುನರ ವಿದ್ಯೆಯ ಪ್ರಭಾವಕ್ಕೆ ಒಳಗಾಗಿದ್ದ ಅಕ್ಕನಿಗೆ ಗಂಡನಾಗಿ ಎರಗಿದ ಕೌಶಿಕನೆಂಬ ಪಾಳೆಯಗಾರನ ನಡುವಿನ ಕತ್ತಿಯ, ಕಾಮದ ಬಿಸುಪನ್ನು ತಾಳಲಾರದವಳಾಗಿ ವಿವಾಹವೇ ಅವಳಿಗೆ ನಿರಶನದ ಮೆಟ್ಟಲಾಗಿಬಿಟ್ಟಿತು. ಪಾಳೆಯಗಾರನಿಂದಾದ ದೇಹ ಮೋಹ ನಗ್ನತೆಯನ್ನು ಅಕ್ಕ ಆಮೇಲೆ ಮುಚ್ಚುವ ಪ್ರಯತ್ನವನ್ನೇ ಮಾಡಲಿಲ್ಲ.

ಉಡುತಡಿಯಿಂದ ಅಕ್ಕ ದೀರ್ಘ ಪ್ರಯಾಣ ಕೈಕೊಂಡು ಶ್ರೀಶೈಲಕ್ಕೆ ಬಂದದ್ದನ್ನು ಹರಿಹರ ಆಕೆಯ ಬದುಕನ್ನು ಕುರಿತಾಗಿ ಬರೆದ ರಗಳೆಯ ಕಥಾನಕದಲ್ಲಿ ಪ್ರಸ್ತಾಪಿಸುತ್ತಾನೆ. ಆದರೆ ಕಲ್ಯಾಣಕ್ಕೆ ಬಂದಳೋ, ಬರಲಿಲ್ಲವೋ ಎಂಬುದನ್ನು ಹೇಳುವುದಿಲ್ಲ. ಶ್ರೀಶೈಲದಲ್ಲಿ ಈಗ ಅಲ್ಲಿಯ ಜನ ಕೃಷ್ಣಾ ನದಿಯ ಪೂರ್ವ ದಿಕ್ಕಿನ ಬೆಟ್ಟದ ಮೇಲಿನ ಶಿಲಾನಿರ್ಮಿತ ಗುಹೆಯನ್ನು ತೋರಿಸಿ ಅದೇ ಅಕ್ಕನು ಹನ್ನೆರಡು ವರ್ಷ ಇದ್ದು ಅಧ್ಯಾತ್ಮ ಸಾಧನೆಗೈದ ಏಕಾಂತ ಸ್ಥಳ ಎನ್ನುತ್ತಾರೆ. ಅದು ಎಷ್ಟರಮಟ್ಟಿಗೆ ನಿಜವೋ ಅರಿವಿಗೆ ಬರುವಂತಿಲ್ಲ. ಜತೆಗೆ ಅಕ್ಕ ಅತ್ತ ಕದಳೀವನದಲ್ಲಿಯೂ ಇದ್ದು ಸಾಧನೆಗೈದಳೆಂದು ಹೇಳುವುದಿದೆ. ಇದಂತೂ ಕೃಷ್ಣಾ ನದಿ ಹಿನ್ನೀರಿನ ಎಡಭಾಗಕ್ಕೆ ಸುಮಾರು ಹತ್ತು, ಹದಿನೈದು ಕಿ.ಮೀ. ಕಾಲು ಹಾದಿಯಾಗಿದ್ದು, ಅದರ ನಡಿಗೆ ಮತ್ತಷ್ಟು ದುರ್ಗಮವೆನಿಸುತ್ತದೆ. ಈ ಪ್ರಾಕೃತಿಕ ವಸ್ತು ಸಂಗ್ರಹಾಲಯದಲ್ಲಿ ಅಕ್ಕನದೆಂದು ಹೇಳುವ ಮೊದಲ ಗುಹೆಯಲ್ಲಿ ಒಬ್ಬೊಬ್ಬರೇ ತಗ್ಗಿ ಬಗ್ಗಿ ಅರವತ್ತು, ಎಪ್ಪತ್ತು ಹೆಜ್ಜೆಗಳಷ್ಟು ದೂರ ನುಸುಳಬೇಕಾದ ಸುರಂಗ ಮಾರ್ಗವೂ ಇದೆ. ಇದರ ಕೊನೆಗೆ ಒಂದು ಗೂಡಿನಲ್ಲಿ ಪುಟ್ಟ ಲಿಂಗವಿದೆ. ಅಲ್ಲೆಲ್ಲ ನೀರ ಹನಿ ಒಸರುತ್ತದೆ. ಸುರಂಗದ ಈಚೆ ವಿಶಾಲ ಗುಹೆಯ ಅವರಣವಿದ್ದು, ಅಕ್ಕನ ಒಂದು ಅಡಿ ಎತ್ತರದ ಶಿಲ್ಪವಿದೆ. ಇದೀಗಲೂ ನಿರ್ಜನವೆನಿಸುವ ಮತ್ತು ಕಠಿಣ ಪ್ರಯಾಣದ ಈ ಸ್ಥಳದಲ್ಲಿ ಅಕ್ಕ ಮಹಾದೇವಿ ಎಂಟುನೂರು ವರ್ಷಗಳ ಹಿಂದೆ ಅಲ್ಲಿ ಹನ್ನೆರಡು ವರ್ಷ ಧ್ಯಾನ ಸಾಧನೆಗೈದಳೇ ಎಂಬ ಅನುಮಾನವುಂಟಾಗುತ್ತದೆ. ಆಕೆ ಒಂದು ವೇಳೆ ಶ್ರೀಶೈಲಕ್ಕೆ ಬಂದಿದ್ದರೆ ಅಲ್ಲೇ ಮಲ್ಲಿಕಾರ್ಜುನನ ಗುಡಿಯ ಹಿಂಭಾಗದಲ್ಲಿ ಈಗಲೂ ಇರುವ ಪುಟ್ಟ ಪುಟ್ಟ ಗುಹಾಮಂಟಪಗಳಲ್ಲಿ ವಾಸವಿದ್ದು ಭಕ್ತಿಸಾಧನೆಗೈದಿರಬೇಕು. ಚೆನ್ನಮಲ್ಲಿಕಾರ್ಜುನನ ಗುಡಿ ಮತ್ತು ಅದರ ಹಿಂಭಾಗದ ತಪೋಮಂಟಪಗಳು ಚಾಲುಕ್ಯರ ಕಾಲದಲ್ಲೇ ನಿರ್ಮಾಣವಾದವುಗಳಂತೆ ತೋರುತ್ತವೆ. ಈ ಮಂಟಪಗಳು ಬಸವ ಕಲ್ಯಾಣದಲ್ಲಿ ಬಸವಾದಿ ಶರಣರ ಧ್ಯಾನಗುಹೆಗಳಂತೆಯೇ ಇವೆ. ಆದರೆ ಕಲ್ಯಾಣದಲ್ಲಿ ಅಕ್ಕನ ಹೆಸರಿನ ಧ್ಯಾನ ಮಂಟಪ ಇಲ್ಲ. ಹಾಗಾಗಿ ಅಕ್ಕ ಕಲ್ಯಾಣಕ್ಕೆ ಬಂದಿದ್ದರ ಕುರುಹು ಅಂದರೆ ಆಕೆ ಬಸವಣ್ಣನವರನ್ನು ಕುರಿತು ಆಡಿರಬಹುದಾದ ಭಕ್ತಿಗೌರವದ ಮಾತುಗಳು.

ಇನ್ನು ಶ್ರೀಶೈಲದ ಮುಖ್ಯ ದೇವತೆ ಮಲ್ಲಿಕಾರ್ಜುನ ಎಂಬ ಹೆಸರೇ ಕುತೂಹಲಕರವಾದುದು. ಅರ್ಜುನನ ತಪಸ್ಸು, ಶಿವನು ಅಡವಿ ಮಲ್ಲಯ್ಯನೆಂಬ ರೂಪದಲ್ಲಿ ಬಂದು ಅವನ ಶಕ್ತಿಯನ್ನು ಪರೀಕ್ಷಿಸಿದ್ದು, ಕೊನೆಗೆ ಅರ್ಜುನನ ಭಕ್ತಿಗೆ ಮೆಚ್ಚಿ ಅಸ್ತ್ರವನ್ನು ನೀಡಿದ ಈ ಸಂಗತಿ